ಅ) ಪ್ರಾಧಿಕಾರದಲ್ಲಿ ವಿಲೇವಾರಿಗಾಗಿ ಬಾಕಿ ಇರುವ ನಿವೇಶನಗಳು ಎಷ್ಟು? ಎಷ್ಟು ವರ್ಷಗಳಿಂದ ಬಾಕಿ ಇವೆ;

ಇ) ಬಾಕಿ ಉಳಿದಿರುವ ನಿವೇಶನಗಳನ್ನು ಯಾವಾಗ ಅರ್ಜಿ ಸಲ್ಲಿಸಿರುವವರಿಗೆ ಕೊಡಲಾಗುವುದು ವಿವರ ನೀಡುವುದು.

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಪಕ್ಷ ರಾಜ್ಯ ಸಚಿವರು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಕ್ಟೋಬರ್ 1988ರಲ್ಲಿ ವಿವಿಧ ಅಳತೆಯ 3200 ನಿವೇಶನಗಳ ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸಿದ ಮೇರೆಗೆ 81,843 ಅರ್ಜಿಗಳನ್ನು ಸಾರ್ವಜನಿಕರಿಂದ ಸ್ವೀಕರಿಸಿರುತ್ತದೆ. ಅಲ್ಲದೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಡಾ: ಬಿ.ಆರ್. ಅಂಬೇಡ್ಕರ್ ಜನ್ಮಶತಾಬ್ದಿ ಅಂಗವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನಿರ್ದಿಷ್ಟಪಡಿಸಿ 20X30 ವಿಸ್ತೀರ್ಣದ 2000 ನಿವೇಶನಗಳ ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು (ಡಿಸೆಂಬರ್ 1988ರಲ್ಲಿ) ಇದರ ಮೇರೆಗೆ, 5,145 ಅರ್ಜಿಗಳನ್ನು ಸ್ವೀಕರಿಸಿರುತ್ತದೆ.

ಹೀಗೆ ಸಾರ್ವಜನಿಕರಿಂದ ಒಟ್ಟು 86,988 ಅರ್ಜಿಗಳನ್ನು ನಿವೇಶನಗಳ ಹಂಚಿಕೆಗಾಗಿ ಸ್ವೀಕರಿಸಲಾಗಿರುತ್ತದೆ.

ಆ) 1988ರ ಅಧಿಸೂಚನೆ ಮೇರೆಗೆ ಹಂಚಿಕೆ ಮಾಡಬೇಕಾಗಿದ್ದ 3,200 ನಿವೇಶನಗಳ ಪೈಕಿ 1534 ನಿವೇಶನಗಳನ್ನು ಡಿಸೆಂಬರ್ 1994ರಲ್ಲಿ ವಿತರಿಸಲಾಗಿದೆ. 152 ಪ್ರಕರಣಗಳಲ್ಲಿ ನ್ಯಾಯಾಲಯದ ತಡೆಯಾಜ್ಞೆಯಾಗೂ ಅನಧಿಕೃತ ಕಟ್ಟಡ, ಇವುಗಳಿಂದಾಗಿ 94-95ರ ಸಾಲಿನಲ್ಲಿ ಬದಲೀ ನಿವೇಶನವನ್ನು ನೀಡಲಾಗಿದೆ.

ಬಡಾವಣೆ: ನಿವೇಶನಗಳನ್ನು ನಿರ್ಮಾಣಕ್ಕಾಗಿ ಭೂಸ್ವಾಧೀನ ಗೊಳಿಸಿಕೊಂಡ ಜಮೀನಿನ ಲಭ್ಯತೆಯ ಆಧಾರದ ಮೇಲೆ ಅರ್ಜಿದಾರರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನ ಹಂಚಿಲು ಅವಲಂಬಿತವಾಗಿರುತ್ತದೆ. ಇತ್ತೀಚೆಗೆ ಬಾಕಿ ಇರುವ ಮೊಕದ್ದಮೆಗಳು ಮತ್ತು ಸ್ವಾಧೀನ ಪಡಿಸಿಕೊಂಡ, ಜಮೀನಿನ ಒತ್ತುವರಿಯ ಕಾರಣದಿಂದಾಗಿ, ಭೂಸ್ವಾಧೀನವು ಕಷ್ಟಕರವಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ (95-96) ಹಂಚಿಕೆಗಾಗಿ ಬಾಕಿ ಇರುವ ಅರ್ಜಿದಾರರಿಗೆ 550 ನಿವೇಶನಗಳನ್ನು ಹಂಚಿಕೆ ಮಾಡಲು ಅಂದಾಜು ಮಾಡಲಾಗಿದೆ.

ಇ) ಅಕ್ಟೋಬರ್ 1988ರ ಪ್ರಕರಣ ಮೇರೆಗೆ ಬಾಕಿ ಇರುವ 1666 ನಿವೇಶನ ಮತ್ತು ಡಾ: ಬಿ.ಆರ್. ಅಂಬೇಡ್ಕರ್ ಜನ್ಮ ಶತಾಬ್ದಿಯದಿಯಲ್ಲಿನ 2000 ನಿವೇಶನಗಳ ಶೀಘ್ರ ವಿತರಣೆಗೆ ಪ್ರಯತ್ನಿಸಲಾಗುತ್ತಿದೆ.

ಕೆ.ಎಫ್. ಡಬ್ಲ್ಯೂ ಯೋಜನೆಯ ಮಂಜೂರಾತಿ.

720 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕ.ಎಫ್.ಡಬ್ಲ್ಯೂ ಜಲಾನಯನ ಯೋಜನೆ ಯಾವ ಯಾವ ಪ್ರದೇಶಕ್ಕೆ ಮಂಜೂರಾತಿಯಾಗಿದೆ?

ಆ) ಕೆಲಸಗಳು ಯಾವಾಗಿನಿಂದ ಪ್ರಾರಂಭವಾಗುತ್ತವೆ.

ಇ) ಈ ಯೋಜನೆಗೆ ಒದಗಿಸಿರುವ ಹಣವೆಷ್ಟು? ಮತ್ತು ಜಿಲ್ಲಾವಾರು ಹಣವೆಷ್ಟು?

ಈ) ಕಾಮಗಾರಿಗಳು ಯಾವ ಇಲಾಖೆ ಮೂಲಕ ನಿರ್ವಹಿಸಲಾಗುತ್ತಿದೆ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಜರ್ಮನ್ ನೆರವಿನ (ಕೆ.ಎಫ್.ಡಬ್ಲ್ಯೂ) ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ಮಂಡ್ಯ ಹಾಸನ ಹಾಗೂ ಕೋಲಾರ ಜಿಲ್ಲೆಯ 5 ಜಲಾನಯನ ಪ್ರದೇಶಗಳನ್ನು ಈ ಯೋಜನೆಯಲ್ಲಿ ಅನುಷ್ಠಾನಗೊಳಿಸಲು ಯೋಚಿಸಲಾಗಿದೆ.

ಆ) ಮಂಜೂರಾತಿಯ ನಂತರ ತೀರ್ಮಾನಿಸಲಾಗುವುದು.

ಇ) 7 ವರ್ಷಗಳ ಅವಧಿಯ ಈ ಯೋಜನೆಯ ಅನುಷ್ಠಾನಕ್ಕೆ 20 ಮಿಲಿಯನ್ ಡಿ.ಎಂ. ಧನಸಹಾಯ ನೀಡಲು (ಸುಮಾರು 55.00 ಕೋಟಿಗಳು) ಜರ್ಮನ್ ಸರ್ಕಾರ ಮುಂದೆ ಬಂದಿದೆ. ಈ ಯೋಜನೆಯ ಅನುಷ್ಠಾನಕ್ಕೆ ಶೇ. 16ರಷ್ಟು ಅನುದಾನವನ್ನು ರಾಜ್ಯ ಸರ್ಕಾರವೂ ಸಹ ತನ್ನ ಪಾಲಾಗಿ ಒದಗಿಸಬೇಕಾಗಿದೆ. ಮಂಜೂರಾತಿ ನೀಡುವ ಸಂದರ್ಭದಲ್ಲಿ ಜಿಲ್ಲಾವಾರು ಅನುಧಾನದ ವಿವರಗಳನ್ನು ನಿರ್ಧರಿಸಲಾಗುವುದು.

ಈ) ಈ ಕಾರ್ಯಕ್ರಮವನ್ನು ಯೋಜನಾ ನಿರ್ದೇಶಕರು ಜಲಾನಯನ ಅಭಿವೃದ್ಧಿ ಯೋಜನೆ ಇವರುಗಳ ಮೂಲಕ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ಸಕಲೇಶಪುರ ತಾಲ್ಲೂಕಿನಲ್ಲಿ ಅಂಗನವಾಡಿಗಳ ಸ್ಥಾಪನೆ

723 - ಶ್ರೀ ಜಿ.ಜಿ. ಶಿವಪ್ಪ (ಸಕಲೇಶಪುರ) : ಮಾನ್ಯ ಸಣ್ಣ ನೀರಾವರಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು?

ಆ) ಅಂಗನವಾಡಿಗಳ ನಿರ್ವಹಣೆಗಾಗಿ ವಿರ್ಚಾಗುತ್ತಿರುವ ಒಟ್ಟು ಮೊತ್ತವೆಷ್ಟು?

ಇ) ತಾಲ್ಲೂಕಿನಲ್ಲಿ ಅಂಗನವಾಡಿ ಇಲ್ಲದ ಗ್ರಾಮಗಳ ಒಟ್ಟು ಸಂಖ್ಯೆ ಎಷ್ಟು;

ಈ) ಹಾಗಿದ್ದಲ್ಲಿ 1996-97ನೇ ಸಾಲಿನಲ್ಲಿ ಎಷ್ಟು ಹೊಸ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗುವುದು ಮತ್ತು ಅವುಗಳಿಗೆ ಕಾರ್ಯಕರ್ತೆಯರನ್ನು ಯಾವಾಗ ನೇಮಕ ಮಾಡಲಾಗುವುದು ಹಾಗೂ ನೇಮಕ ಮಾಡಲು ಅನುಸರಿಸುವ ನಿಯಮಗಳೇನು?